ದಿನಾಂಕಃ 10**-03-2020**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ೪ ನೇ ತರಗತಿ ಓದಿದ್ದೇನೆ. ನನಗೆ ಸಹಿ ಮಾಡಲು ಕನ್ನಡದಲ್ಲಿ ಬರುತ್ತದೆ. ದಾವಾ ಸ್ವತ್ತು ಪಂಚಾಯಿತಿಯಿಂದ ಮಂಜೂರಾದ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತಿನ ಖಾತೆ ನಿಮ್ಮ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ಸೀಬಿ ಅಗ್ರಹಾರ ಗ್ರಾಮ ಪಂಚಾಯಿತಿಯಿಂದ ನಿಮ್ಮ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ. ನಿಪಿ-೧ರಲ್ಲಿರುವ ಪೋಟೋ ನಿಮ್ಮದು ಹಾಗೂ ಸಹಿ ನಿಮ್ಮದು ಎಂದರೆ ಸರಿ. ನಿಮಗೆ ಬುದ್ಧಿ, ಜ್ಞಾನ ಸರಿಯಾಗಿದೆ ಎಂದರೆ ಸರಿ. ನೀವು ದಿಃ ೧೪.೦೩.೨೦೧೧ ರಂದು ವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿಯಲ್ಲ.ದಿಃ ೧೪.೦೩.೨೦೧೧ ರಂದು ನಿಮಗೆ ಪಂಚಾಯಿತಿಯವರು ನೀಡಿದ ಮೂಲ ಪತ್ರವನ್ನು ಸಹ ವಾದಿಗೆ ನೀಡಿದ್ದೀರಿ ಎಂದರೆ ನಾನು ಹಕ್ಕು ಪತ್ರವನ್ನು ನನ್ನ ಅಣ್ಣನ ಮನೆಯಲ್ಲಿ ಇಟ್ಟಿದ್ದೆ ಆಗ ಅದನ್ನು ವಾದಿ ತೆಗೆದುಕೊಂಡು ಮೋಸ ಮಾಡಿದ್ದಾರೆ ಎನ್ನುತ್ತಾರೆ. ಸಾಮಾನ್ಯವಾಗಿ ನೀವು ಯಾವುದೇ ಪತ್ರಕ್ಕೆ ಸಹಿ ಮಾಡುವ ಮೊದಲು ಅದನ್ನು ಓದಿಸಿ, ವಿಚಾರ ತಿಳಿದುಕೊಂಡು ಆನಂತರ ಸಹಿ ಮಾಡುತ್ತೀರಿ ಎಂದರೆ ಸರಿಯಲ್ಲ.

ನೀವು ಈ ದಾವೆಗೆ ವಕಾಲತ್ತು, ತಕರಾರು ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ಓದಿಸಿ, ತಿಳಿದುಕೊಂಡು ಸಹಿ ಮಾಡಿದ್ದೀರಿ ಎಂದರೆ ನಾನು ಓದಿ ತಿಳಿದುಕೊಂಡಿರುವುದಿಲ್ಲ ಹಾಗೇ ಸಹಿ ಮಾಡಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಈಗಲೂ ವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾನೇ ಸ್ವಾಧೀನದಲ್ಲಿದ್ದೇನೆ ಎನ್ನುತ್ತಾರೆ.

ನಿಮ್ಮ ಮಗನನ್ನು ಮುಂದೆ ಕಳುಹಿಸಿ ವಾದಿ ಹೆಸರಿಗೆ ಖಾತೆ ಆಗದಂತೆ ಪಂಚಾಯಿತಿಯಲ್ಲಿ ತಡೆದ್ದೀರಿ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡಿ ರೂ. ೩೦ ಸಾವಿರ ಪಡೆದಿದ್ದೀರಿ ಎಂದರೆ ಸರಿಯಲ್ಲ. ನಾನು ವಾದಿ ವಿರುದ್ಧ ಮೋಸ ಮಾಡಿದ್ದಾರೆ ಎಂದು ಹೇಳಿ ಯಾವುದೇ ಕ್ರಿಮಿನಲ್ ಪ್ರಕರಣ ಹಾಕಿಲ್ಲ. ದಾವಾ ಸ್ವತ್ತನ್ನು ಲಪಟಾಯಿಸಲು ಮಾರಾಟ ಮಾಡಿಲ್ಲ ಎಂದು ಮತ್ತು ಹಕ್ಕು ಪತ್ರವನ್ನು ಕಳ್ಳತನ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾ.ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು , ಅಧಿಕಾರ, ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)**

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.